**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 12.09.2021.

**1] ನಿಡಗುಂದಿ ಪೊಲೀಸ ಠಾಣೆ ಗುನ್ನೆ ನಂ: 107/2021 ಕಲಂ: 279, 337, 338, 304 (ಎ) ಐಪಿಸಿ**

ದಿನಾಂಕ: 11.09.2021 ರಂದು 14:30 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಪರಶುರಾಮ ಚಂದ್ರಾಮಪ್ಪ ಮಾಳಗೊಂಡ ಸಾ: ಬೀರಲದಿನ್ನಿ ಕ್ರೂಜರ್ ನಂ: ಕೆಎ:28 ಪಿ:1761 ನೇದ್ದರ ಚಾಲಕ. ಈತನು ತಾನು ನಡೆಯಿಸುತ್ತಿದ್ದ ಕ್ರೂಜರ್ ಜೀಪ ನೇದ್ದನ್ನು ಉಣ್ಣಿಭಾವಿ ಕ್ರಾಸ್ ಕಡೆಯಿಂದ ನಿಡಗುಂದಿ ಕಡೆಗೆ ಹೋಗುವ ಎನ್.ಎಚ್-50 ರಸ್ತೆಯ ಮೇಲೆ ಅಬ್ಬಿಹಾಳ ಕ್ರಾಸ್ ಸಮೀಪ ಬದ್ರು ಬೀಳಗಿ ಸಾ॥ ವಂದಾಲ ಇವರ ಜಮೀನದ ಹತ್ತಿರ ಬಹಳ ಜೋರಾಗಿ, ನಿಷ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಯಿಸಿ ಒಮ್ಮೆಲೆ ಎಡಗಡೆಗೆ ತಿರಿವಿಕೊಂಡು ಎಡಹೋಳು ಮಗ್ಗುಲಾಗಿ ಪಲ್ಟಿ ಮಾಡಿ ಕೆಡವಿ ಅಪಘಾತ ಮಾಡಿ, ಕ್ರೂಜರ ಜೀಪದಲ್ಲಿದ್ದ 11 ಜನರಿಗೆ ಸಾದ ವ ಭಾರಿ ಗಾಯಪಡಿಸಿದ್ದು, ಅಲ್ಲದೇ ತಾನು ಸಹ ಗಾಯಹೊಂದಿದ್ದು, ಸದರಿಯವರಿಗೆ ಹೆಚ್ಚಿನ ಉಪಚಾರ ಕುರಿತು ವಿಜಯಪುರಕ್ಕೆ ಹೋಗುತ್ತಿರುವಾಗ ಶಿವಲೀಲಾ ಇವಳು ಮಾರ್ಗ ಮಧ್ಯ ಮರಣ ಹೊಂದುವಂತೆ ಮಾಡಿದ ಅಪರಾಧ. ಈ ಬಗ್ಗೆ ಶಾಂತಪ್ಪ ಭೀಮಪ್ಪ ಸುರಂಗದ ಸಾ: ಬೀರಲದಿನ್ನಿ ತಾ; ನಿಡಗುಂದಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.09.2021 ರಂದು ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಆದರ್ಶನಗರ ಪೊಲೀಸ ಠಾಣೆ ಗುನ್ನಾ ನಂ: 102/2021 ಕಲಂ: 188, 269 ಐ.ಪಿ.ಸಿ.**

ದಿನಾಂಕ: 10.09.2021 ರಂದು 21.15 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ಜಿತೇಂದ್ರ @ ಜೀತು ತಂದೆ ನೀಲು ಚವ್ಹಾಣ, ಸಾ: ಬೂತನಾಳ ತಾಂಡಾ, ವಿಜಯಪುರ 2] ಬಾಳೂ ರಾಜು ರಾಠೋಡ, ಸಾ: ಬೂತನಾಳ ತಾಂಡಾ, ವಿಜಯಪುರ ಇವರು ವಿಜಯಪೂರ ಶಹರದ ಬೂತನಾಳ ತಾಂಡದಲ್ಲಿ ಸಾರ್ವಜನಿಕ ಗಣಪತಿ ಪ್ರತಿಷ್ಠಾಪನೆಗೆ ಸುಮಾರು ನಾಲ್ಕುನೂರರಿಂದ ಐದುನೂರು ಜನರನ್ನು ಸೇರಿಸಿಕೊಂಡು ಗಣಪತಿ ಪ್ರತಿಷ್ಠಾಪಣೆ ಕಾರ್ಯಕ್ರಮದಲ್ಲಿ ಕುಣಿದು ಮಾನ್ಯ ರಾಜ್ಯ ಸರಕಾರದ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಹೊರಡಿಸಿರುವ ಗಣಪತಿ ಪ್ರತಿಷ್ಠಾಪಣೆ ಆದೇಶವನ್ನು ಹಾಗೂ ಮಾನ್ಯ ರಾಜ್ಯ ಸರ್ಕಾರ ರವರು ಕೋರೋನಾ ವೈರಸ್/ಕೊವಿಡ್-19 [ಮೂರನೇಯ ಅಲೆ] ಪ್ರಕರಣಗಳು ಸಾಂಕ್ರಾಮಿಕ ರೋಗ ಗ್ರಾಹಕರಿಗೆ ಒಬ್ಬರಿಂದ ಒಬ್ಬರಿಗೆ ಹರಡದಂತೆ ಮುಂಜಾಗ್ರತಾ ಕ್ರಮವಾಗಿ ಹೊರಡಿಸಿದ ಆದೇಶವನ್ನು ಉಲ್ಲಂಘನೆ ಮಾಡಿದ್ದು ಅದೆ. ಈ ಬಗ್ಗೆ ಗೋವಿಂದ ತಂದೆ ಬಾಸು ನಾಯಕ, ನೈರ್ಮಲ್ಯ ನಿರೀಕ್ಷಕರು, ಮಹಾನಗರ ಪಾಲಿಕೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.09.2021 ರಂದು ಆದರ್ಶನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 290/2021 ಕಲಂ: 87 ಕೆ.ಪಿ.ಆ್ಯಕ್ಟ**

ದಿನಾಂಕ: 11.09.2021 ರಂದು 00.15 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ವಿಠ್ಠಲ ಟೋಪು ರಾಠೋಡ 2] ಸುರೇಶ ಉಮೇಶ ಚವ್ಹಾಣ 3] ಅರುಣ ಸೀತಾರಾಮ ಪವಾರ 4] ನವನಾಥ ರಮೇಶ ಚವ್ಹಾಣ 5] ಆಕಾಶ ರಾಮದಾಸ ರಾಠೋಡ 6] ಆಕಾಶ ಪೋಮು ರಾಠೋಡ 7] ಪಿಂಟು ಧರ್ಮು ರಾಠೋಡ 8] ಜಗದೇವ ಬದ್ದು ರಾಠೋಡ 9] ಅಶೋಕ ಗೋಪಿಚಂದ ಲಮಾಣಿ 10] ಮಹೇಶ ಗಣು ಜಾಧವ ಸಾ: ಎಲ್ಲರೂ ಅರಕೇರಿ ತಾಂಡೆ ನಂ: 1 ಇವರು ಅರಕೇರಿ ಗ್ರಾಮದ ತಾಂಡೆ ನಂ-1 ರಲ್ಲಿ ಸರಕಾರಿ ಪ್ರಾಥಮಿಕ ಶಾಲೆಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಕುಳಿತು ತಮ್ಮ ತಮ್ಮ ಫಾಯ್ದೆಗೋಸ್ಕರ ಇಸ್ಪೇಟ ಎಲೆಗಳ ಮೇಲೆ ಹಣವನ್ನು ಪಣಕ್ಕೆ ಕಟ್ಟಿ ಅಂದರ-ಬಾಹರ ಅಂಬುವ ಇಸ್ಪೆಟ ಮನ್ನಾ ಜೂಜಾಟ ಆಡುತ್ತಿದ್ದಾಗ ಸಿಕ್ಕಿದ್ದು ಇರುತ್ತದೆ. ಜಪ್ತಾದ ಹಣ-5010/-2) 52 ಇಸ್ಪೇಟ ಎಲೆಗಳು ಕಿ॥ 00=00 ಈ ಬಗ್ಗೆ ಸ:ತ: ಜಿ ಎಸ್ .ಉಪ್ಪಾರ ಪಿಎಸ್ಐ ರೂರಲ್ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.09.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಮಹಿಳಾ ಪೊಲೀಸ ಠಾಣೆ ಗುನ್ನೆ ನಂ: 106/2021 ಕಲಂ: ಮಹಿಳೆ ಮತ್ತು ಮಕ್ಕಳು ಕಾಣೆ**

ದಿನಾಂಕ: 09.09.2021 **ರಂದು 16.00** ಗಂಟೆಗೆಯಿಂದ 17-30 ಗಂಟೆಯ ನಡುವಿವ ಅವದಿಯಲ್ಲಿ ಇದರಲ್ಲಿಯ ಕಾಣೆಯಾದ 1] ಸುಹಾಸಿನಿ ಗಂ॥ ವಿಶ್ವನಾಥ ಆವೇರಿ ವಯಾ-33 ವರ್ಷ 2] ಕಿರಣ ವಿಶ್ವನಾಥ ಆವೇರಿ ವಯಾ 13 ವರ್ಷ 3] ಕೌಸಿಕ ವಿಶ್ವನಾಥ ಆವೇರಿ ವಯಾ-09 ವರ್ಷ 4] ಕೃಷ್ ವಿಶ್ವನಾಥ ಆವೇರಿ ವಯಾ 9 ವರ್ಷ ಸಾ॥ ಎಲ್ಲರೂ ಅಯ್ಯಪ್ಪ ನಗರ ವಿಜಯಪುರ. ಸುಹಾಸಿನಿ ಇವಳು ಮನೆಯಲ್ಲಿ ಯಾರಿಗೂ ಹೇಳದೆ ಕೇಳದೆ ಅವಳ ಮಕ್ಕಳಾದ 1. ಕಿರಣ 13 ವರ್ಷ 2. ಕೌಸಿಕ 9 ವರ್ಷ 3. ಕೃಷ್ 9 ವರ್ಷ ಇವರನ್ನು ಕರೆದುಕೊಂಡು ಕಾರ್ ಬಾಡಿಗೆ ಮಾಡಿಕೊಂಡು ಪಿರ್ಯಾದಿಯ ಇನ್ನೊಬ್ಬ ಮೊಮ್ಮಗಳಾದ ಲಕ್ಷ್ಮೀ ಇವಳಿಗೆ ದೇವೂರದ ಬಸ್ ಸ್ಟ್ಯಾಂಡಿನಲ್ಲಿ ಇಳಿಸಿ ಎಲ್ಲಿಗೋ ಹೋಗಿ ಕಾಣೆಯಾಗಿರುತ್ತಾಳೆ. ಈ ಬಗ್ಗೆ ಜಾನಪ್ಪ ಕ್ಯಾಮರಾಯ ಪೂಜಾರಿ ಸಾ॥ ದೇವೂರ ತಾ॥ ದೇವರಹಿಪ್ಪರಗಿ ಹಾಲಿ ಅಯ್ಯಪ್ಪ ನಗರ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.09.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.